**MODEL QUESTION PAPER**
**SECOND YEAR P.U.C**
**ACCOUNTANCY (30)**

**Time: 3 Hours 15 Minutes** **Max Marks: 100**

**Instructions:**
**1.The question paper contains four parts A, B, C and D. Part-A consists of four sections I, II, III and IV.**
**2. Provide working notes wherever necessary.**
**3. 15 minutes extra has been allotted for candidates to read the questions.**
**4. Figures in the right hand margin indicate full marks.**

## Part –A

I Choose the correct answer from the choices given: 5 x 1 = 5

1.Not-for-profit organisations are formed for:
(a) Profit
(b) Service
(c) Profit & Service
(d) None of the above

2. Nanda, Padma and Chandra are partners sharing profits in the ratio of 5:3:2. If Padma retires, the New Profit Sharing Ratio between Nanda and Chandra will be-
(a) 5:2
(b) 5:3
(c) 3:2
(d) None of the above

3. Equity shareholders are:
(a) Creditors of the company
(b) Owners of the company
(c) Customers of the company
(d) None of the above

4. Current assets does not include:
(a) Short term investments
(b) Cash & cash equivalents
(c) Building
(d) Inventories

5. Financial statements of a business enterprise include:
(a) Balance sheet
(b) Statement of profit and loss and balance sheet
(c) Cash flow statement
(d) All the above

II Fill in the blanks by choosing the appropriate answers from those given in the brackets. 5 x 1 = 5

**(Interest rate, Vertical analysis, Cash outflow, Two, Sacrifice Ratio)**

6. In order to form Partnership, there should be at least ---- persons.
7. Old share – New Share = ---------.
8. 2000, 12% debentures issued at par, here 12% means --------.
9. Common size analysis is also known as ------.
10. Purchase of any asset by paying cash results in --------.

III Match the following: 5 x 1 = 5

DPUE

11.

| A | B |
|---|---|
| a. Partnership Deed | i. Shareholders fund |
| b. Goodwill | ii. 2013 |
| c. Realisation A/C | iii. Written agreement |
| d. Companies Act | iv. Intangible asset |
| e. Share Capital | v. Dissolution of Partnership firm |

IV Answer the following questions in ONE word or ONE sentence each: 5 x 1 = 5

12. Give an example for not-for-profit organisation.
13. Who is an executor?
14. Expand DRR.
15. Liquidity ratios are short-term in nature (State True/False)
16. Give the meaning of cash flows.

## Part –B

V Answer any **FIVE** questions, each question carries **TWO** marks. 5 x 2 = 10

17. State two features of Receipts and Payments Account.
18. What is fixed capital system?
19. State any two factors which determine the goodwill of the firm.
20. Give the journal entry for an asset taken over by a partner on Dissolution of a Firm.
21. State any two categories of Share Capital.
22. Write any two objectives of financial statements.
23. List any two tools of Financial Statement Analysis.
24. Mention two activities which are classified as per AS-3.

## Part –C

VI Answer any **FOUR** questions, each question carries **SIX** marks. 4 x 6 = 24

25. Sapna and Adarsh are partners in firm. Sapna's drawings for the year 2021-22 are given as under:

    ₹6,000 on 01.06.2021
    ₹4,000 on 30.09.2021
    ₹3,000 on 30.11.2021
    ₹5,000 on 01.02.2022

    Calculate interest on Sapna's drawings at 12% p.a. for the year ending on 31/03/2022 under product method.

26. Arjun, Anshul and Akash are partners in a firm sharing profits and losses in the ratio of 2:2:1 respectively. Anshul retires from the firm. Arjun and Akash agreed to share the future profits in the ratio of 3:1. Calculate gain ratio of Arjun and Akash.

27. Navya, Deepa are Kiran are partners sharing profits and losses in the ratio of 2:2:1. Their capitals as on 01/04/2021 were ₹90,000, ₹90,000 and ₹45,000 respectively. Deepa died on 01/10/2021 and the Partnership Deed provided the following:
    a) Interest on Deepa's Capital at 6% p.a.
    b) Deepa's salary ₹2500 p.m.

DPUE

c) Deepa's share of accrued profit up to the date of death based on previous year's profit. Firms profit for the year 2020-21 was ₹72000.

d) Deepa's share of Goodwill ₹12,000 (as per AS26)

Ascertain the amount payable to Deepa's Executor by preparing Deepa's Capital A/c

28. Vignesh Co. Ltd., issued 10,000, 8% debentures of ₹100 each at par, payable as follows:
₹20 on application
₹50 on allotment
₹30 on first and final call.
All the debentures were subscribed and the money duly received.
Pass the journal entries in the books of the company.

29. From the following information extracted from the books of Sunrise Ltd., prepare Balance Sheet of the company as at 31-03-2022 as per Schedule III of Companies Act, 2013.

| Particulars | ₹ |
|---|---|
| Shareholders fund | 20,00,000 |
| Non-current Liabilities | 19,60,000 |
| Fixed Assets | 32,00,000 |
| Inventories | 80,000 |
| Trade payables | 1.20,000 |
| Trade Receivables | 3,20,000 |
| Cash and Cash Equivalents | 4,80,000 |

30. Calculate Current Ratio and Quick Ratio from the following information:

| Particulars | ₹ |
|---|---|
| Inventories | 1,20,000 |
| Trade receivables | 90,000 |
| Cash and cash equivalents | 22,800 |
| Trade payables | 2,34,000 |
| Current Investments | 7,200 |
| Proposed dividend | 6,000 |
| Bank overdraft | 60,000 |

31. From the following information, calculate cash flow from financing activities.

| Particulars | 01-04-2020 (₹) | 31-03-2021 (₹) |
|---|---|---|
| Debentures | 8,00,000 | 10,00,000 |
| Preference share capital | 3,00,000 | 5,00,000 |

During the year, the company redeemed debentures of ₹1,00,000.

## <u>Part–D</u>

VII Answer any **Three** questions, each question carries **TWELVE** marks. **3 x 12 = 36**

32. Following are the Balance Sheet and Receipt & Payment Account of Star Sports Club, Sagara.

**Balance Sheet as on 31/03/2021**

| Liabilities | ₹ | Assets | ₹ |
|---|---|---|---|
| Outstanding salary | 6,000 | Cash | 10,500 |
| Subscriptions received in advance | 5,000 | Sports Materials | 25,000 |
| Capital Fund | 1,35,500 | Furniture | 21,000 |
| | | Land | 90,000 |
| | 1,46,500 | | 1,46,500 |

**Receipt and payment A/c for the year ending 31/03/2022**

**Dr.** **Cr.**

| Receipts | ₹ | Payments | ₹ |
|---|---|---|---|
| To Balance b/d | 10,500 | By Salary | 23,000 |
| To Subscriptions | 62,000 | By Sports materials | 15,000 |
| To Entrance Fees | 10,000 | By Investments | 20,000 |
| To Sale of old newspaper | 2,000 | By Postage | 1,400 |
| To Sports Fees | 7,500 | By Electricity charges | 1,600 |
| | | By Up-keep of grounds | 6,500 |
| | | By News paper | 6,000 |
| | | By Balance c/d | 18,500 |
| | 92,000 | | 92,000 |

Adjustments: a) Outstanding subscriptions for 2021-22 ₹2,500
b) Outstanding salary as on 31/03/2022 ₹8,000
c) Half of the Entrance fees are to be capitalized.
d) Depreciation on sports materials amounted to ₹8,500

Prepare: i) Income and Expenditure account for the year ending 31/03/2022 &
ii) Balance Sheet as on that date.

33. Ashwini and Anitha are partners sharing profits and losses in the ratio of 3:2. Their Balance Sheet as on 31/03/2021 was as follows:

**Balance Sheet as on 31-03-2021**

| Liabilities | ₹ | Assets | ₹ |
|---|---|---|---|
| Creditors | 30,000 | Cash at Bank | 32,500 |
| Bills Payable | 10,500 | Bills Receivable | 8,000 |
| Reserve Fund | 30,000 | Debtors | 40,000 |
| Capitals | | Stock | 25,000 |
| Ashwini | 1,00,000 | Furniture | 20,000 |
| Anitha | 70,000 | Building | 115,000 |
| | 2,40,500 | | 2,40,500 |

On 01.04.2021 Anvitha is admitted into the partnership on the following terms:

a) She brings in ₹50,000 as her capital and ₹30,000 towards goodwill for $1/6^{th}$ share in the future profits.
b) Half of the Goodwill is to be withdrawn by the Old Partners**. (As per AS 26)**
c) Depreciate furniture by 10% and appreciate buildings by ₹23,000.
d) Make a provision for doubtful debts at 5% on debtors.
e) Provide ₹2,000 for outstanding repair bills.

Prepare: i) Revaluation Account
ii) Partners' Capital Accounts &
iii) New Balance Sheet of the firm.

34. Suma and Reema are partners sharing profits and losses in the ratio of 2:1 Their Balance Sheet as on 31/03/2022 is as follows:

**Balance Sheet as on 31/03/2022**

| Liabilities | ₹ | Assets | | ₹ |
|---|---|---|---|---|
| Sundry Creditors | 12,000 | Cash at Bank | | 10,000 |
| Bills payable | 20,000 | Bills Receivable | | 10,000 |
| Suma's Loan | 7,000 | Sundry Debtors | 45,000 | |
| Reserve Fund | 36,000 | (-)PDD | 5,000 | 40,000 |
| Capitals: | | Investments | | 15,000 |
| Suma | 1,00,000 | Furniture | | 20,000 |
| Reema | 50,000 | Machinery | | 25,000 |
| | | Vehicle | | 90,000 |
| | | P/L A/C | | 15,000 |
| | **2,25,000** | | | **2,25,000** |

On the above date the firm was dissolved.

a) The assets were realized as follows:
Bills Receivable ₹8,500, Sundry Debtors ₹42,000, Investments ₹18,000, Machinery ₹20,000 and Furniture ₹18,000.

b) Vehicle was taken over by Suma at ₹82,000.

c) Dissolution expenses were ₹3000

d) All the liabilities were discharged in full.

Prepare:
i. Realization A/c
ii. Partners' Capital Accounts and
iii. Bank A/c

35. Cogniquest Ltd., issued 20,000 equity shares of ₹100 each at a premium of ₹10 per share. The amount was payable as follows:

₹20 on application
₹50 on allotment (including premium)
₹40 on first and final call

All the shares were subscribed and the money duly received except the first and final call on 1000 shares. The Directors forfeited these shares and re-issued at ₹85 each as fully paid.
Pass the necessary journal entries in the books of the company.

36. Pass the journal entries for the following:

a. Issued 10,000, 9% debentures of ₹100 each at a premium of 10% and redeemable at par.

b. Issued 10,000, 9% debentures of ₹100 each at a discount of 10% and redeemable at a premium of 10%.
c. Issued 10,000, 9% debentures of ₹100 each at a premium of 10% and redeemable at a premium of 10%
d. Issued 10,000, 9% debentures of ₹100 each at a discount of 10% and redeemable at par.

37. From the following Balance sheet of Venus Company Ltd., prepare Common Size Balance Sheet as on 31/03/2021 and 31/03/2022.

**Balance Sheet as on 31/03/2020 and 31/03/2021**

| Particulars | 31/03/2021 ₹ | 31/03/2022 ₹ |
|---|---|---|
| **Equity and Liabilities:** | | |
| 1) Shareholders' Fund | | |
| Share capital | 24,00,000 | 30,00,000 |
| Reserves & Surplus | 10,00,000 | 15,00,000 |
| 2) Non-Current Liabilities: | | |
| Long term borrowings | 10,00,000 | 12,00,000 |
| 3) Current Liabilities: | | |
| Trade Payables | 21,00,000 | 26,00,000 |
| **Total** | 65,00,000 | 83,00,000 |
| **Assets:** | | |
| 1) Non-Current Assets: | | |
| Tangible Assets | 26,00,000 | 28,00,000 |
| Intangible Assets | 12,00,000 | 20,00,000 |
| 2) Current Assets: | | |
| Inventories | 7,00,000 | 13,00,000 |
| Other Current Assets | 20,00,000 | 22,00,000 |
| **Total** | 65,00,000 | 83,00,000 |

38. From the following information calculate -
1. Inventory Turnover Ratio
2. Trade Receivable Turnover Ratio
3. Trade Payable Turnover Ratio
4. Gross Profit Ratio
5. Net Profit Ratio
6. Operating Ratio

| Particulars | ₹ |
|---|---|
| Revenue from operations | 12,00,000 |
| Gross Profit | 2,40,000 |
| Average Inventory | 1,20,000 |
| Net credit revenue from operations | 7,20,000 |
| Net credit purchases | 6,00,000 |
| Average trade payables | 3,00,000 |
| Average trade receivables | 1.80,000 |
| Operating expenses | 1,20,000 |
| Net profit | 1,20,000 |

DPUE

## **Part –E**

**(Practical Oriented Questions)**

VIII Answer any **TWO** questions, each question carries **FIVE** marks. 2 x 5 = 10

39. How do you treat the following in the absence of Partnership Deed?
    a) Profit Sharing Ratio
    b) Interest on Capital
    c) Interest on Drawing
    d) Interest on advances from partners
    e) Remuneration to partners for firm's work

40. Write the pro-forma of a Balance Sheet of a Company with main heads only.

41. Prepare Comparative Statement of Profit and Loss with 5 imaginary figures.

*********

DPUE

ದ್ವಿತೀಯ ಪಿ.ಯು.ಸಿ ಮಾದರಿ ಪ್ರಶ್ನೆಪತ್ರಿಕೆ

ಸಮಯ: 3 ಗಂಟೆ 15 ನಿಮಿಷಗಳು (ಕನ್ನಡ ಆವೃತ್ತಿ) ಗರಿಷ್ಠ ಅಂಕಗಳು: 100

**ಸೂಚನೆಗಳು:**

- ಪ್ರಶ್ನೆ ಪತ್ರಿಕೆಯು ಎ, ಬಿ, ಸಿ, ಡಿ ಮತ್ತು ಇ ಭಾಗಗಳನ್ನು ಹೊಂದಿದೆ. ಭಾಗ–ಎ. I, II, III, IV ವಿಭಾಗಗಳನ್ನು ಒಳಗೊಂಡಿದೆ.
- ಅಗತ್ಯವಿರುವ ಕಡೆ ಲೆಕ್ಕದ ಟಿಪ್ಪಣಿಗಳನ್ನು ಬರಿಯಿರಿ.
- ಅಭ್ಯರ್ಥಿಗಳಿಗೆ ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷ ಅವಧಿಯನ್ನು ಹೆಚ್ಚುವರಿಯಾಗಿ ನೀಡಿದೆ.
- ಹಾಳೆಯ ಬಲಬದಿಯಲ್ಲಿ ಬರೆದಿರುವ ಸಂಖ್ಯೆಗಳು ಪೂರ್ಣ ಅಂಕಗಳನ್ನು ತೋರಿಸುತ್ತವೆ.

**ಭಾಗ – ಎ**

I ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 5 x 1 = 5

1.ಲಾಭಕ್ಕಲ್ಲದ ಸಂಸ್ಥೆಗಳು ಇದಕ್ಕಾಗಿ ಸ್ಥಾಪನೆಯಾಗಿರುತ್ತವೆ–
(ಎ) ಲಾಭ
(ಬಿ) ಸೇವೆ
(ಸಿ) ಲಾಭ ಮತ್ತು ಸೇವೆ
(ಡಿ) ಮೇಲಿನ ಯಾವುದೂ ಅಲ್ಲ

2. ನಂದಾ. ಪದ್ಮಾ ಮತ್ತು ಚಂದ್ರ ಪಾಲುದಾರರಾಗಿದ್ದು, ಲಾಭ–ನಷ್ಟವನ್ನು 5:3:2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ಪದ್ಮಾಳು ಪಾಲುದಾರಿಕೆಯಿಂದ ನಿವೃತ್ತಳಾದರೆ, ನಂದಾ ಮತ್ತು ಚಂದ್ರ ರ ಹೊಸ ಲಾಭ ಹಂಚಿಕೆಯ ಅನುಪಾತವು:
(ಎ) 5:2
(ಬಿ) 5:3
(ಸಿ) 3:2
(ಡಿ) ಮೇಲಿನ ಯಾವುದೂ ಅಲ್ಲ

3. ಸಾಮಾನ್ಯ ಶೇರುದಾರರು–
(ಎ) ಕಂಪನಿಯ ಸಾಲಿಗರು
(ಬಿ) ಕಂಪನಿಯ ಮಾಲೀಕರು
(ಸಿ) ಕಂಪನಿಯ ಗ್ರಾಹಕರು
(ಡಿ) ಮೇಲಿನ ಯಾವುದೂ ಅಲ್ಲ

4. ಈ ಕೆಳಗಿನ ಯಾವುದನ್ನು ಚಾಲ್ತಿ ಆಸ್ತಿಗಳು ಒಳಗೊಂಡಿರುವುದಿಲ್ಲ?
(ಎ) ಅಲ್ಪಾವಧಿ ಹೂಡಿಕೆಗಳು
(ಬಿ) ನಗದು ಮತ್ತು ನಗದು ಸಮಾನಾಂತರಗಳು
(ಸಿ) ಕಟ್ಟಡ
(ಡಿ) ದಾಸ್ತಾನು

5. ಒಂದು ಸಂಸ್ಥೆಯ ಹಣಕಾಸು ತಃಖ್ತೆಗಳು ಸಾಮಾನ್ಯವಾಗಿ ಇದನ್ನು ಒಳಗೊಂಡಿರುತ್ತವೆ.
(ಎ) ಅಢಾವೆ ಪತ್ರಿಕೆ
(ಬಿ) ಲಾಭ ಮತ್ತು ನಷ್ಟ ತಃಖ್ತೆ
(ಸಿ) ನಗದು ಹರಿವು ತಃಖ್ತೆ
(ಡಿ) ಮೇಲಿನ ಎಲ್ಲವೂ

II. ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ. 5 x 1 = 5

**(ಬಡ್ಡಿಯ ದರ, ಲಂಬಾತ್ಮಕ ವಿಶ್ಲೇಷಣೆ, ನಗದು ಹೊರಹರಿವು, ಇಬ್ಬರು, ತ್ಯಾಗದ ಅನುಪಾತ)**

6. ಪಾಲುದಾರಿಕೆಯನ್ನು ಸ್ಥಾಪಿಸಲು ಅವಶ್ಯವಿರುವ ಪಾಲುದಾರರ ಸಂಖ್ಯೆ ------.
7. ಹಳೆಯ ಪಾಲು – ಹೊಸ ಪಾಲು = -----------.
8. 2000, ಶೇಕಡಾ 12 ರ ಸಾಲಪತ್ರಗಳನ್ನು ಮುಖಬೆಲೆಗೆ ಬಿಡುಗಡೆ ಮಾಡಿದೆ. ಇಲ್ಲಿ ಶೇಕಡಾ 12 ----- ಆಗಿದೆ.
9. ಸಾಮಾನ್ಯ ಗಾತ್ರದ ವಿಶ್ಲೇಷಣೆಯನ್ನು ------- ಎಂದು ಕರೆಯುತ್ತಾರೆ.
10. ನಗದು ಹಣವನ್ನು ಪಾವತಿಸಿ ಖರೀದಿಸುವ ಯಾವುದೇ ಆಸ್ತಿಯು --------- ಗೆ ಕಾರಣವಾಗುತ್ತದೆ.

III ಹೊಂದಿಸಿ ಬರೆಯಿರಿ. 5 x 1 = 5

11. A B

| | |
|---|---|
| a. ಪಾಲುದಾರಿಕೆ ಕರಾರು ಪತ್ರ | i. ಶೇರುದಾರರ ನಿಧಿಗಳು |
| b. ಕೀರ್ತಿಮೌಲ್ಯ | ii. 2013 |
| c. ವಿಲೇವಾರಿ ಖಾತೆ | iii. ಲಿಖಿತ ಒಪ್ಪಂದ |
| d. ಕಂಪನಿಯ ಕಾನೂನು | iv. ಅಗೋಚರ ಆಸ್ತಿ |
| e. ಶೇರು ಬಂಡವಾಳ | v. ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ |

IV ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ. 5 x 1 = 5

12. ಲಾಭಕ್ಕಲ್ಲದ ಸಂಸ್ಥೆಗೆ ಒಂದು ಉದಾಹರಣೆ ಕೊಡಿ.
13. ವಾರಸುದಾರ ಎಂದರೆ ಯಾರು?
14. D R R ಅನ್ನು ವಿಸ್ತರಿಸಿ.
15. ದ್ರವ್ಯತ್ವ ಅನುಪಾತಗಳು ಸ್ವರೂಪದಲ್ಲಿ ಅಲ್ಪಾವಧಿಯ ಅನುಪಾತಗಳಾಗಿವೆ. (ಸರಿ/ತಪ್ಪು ತಿಳಿಸಿ)
16. ನಗದು ಹರಿವಿನ ಅರ್ಥ ಕೊಡಿ.

## ಭಾಗ – ಬಿ

V ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಎರಡು** ಅಂಕಗಳು: 5 × 2 = 10

17. ಸ್ವೀಕೃತಿ ಮತ್ತು ಪಾವತಿ ಖಾತೆಯ ಯಾವುದಾದರೂ ಎರಡು ಲಕ್ಷಣಗಳನ್ನು ತಿಳಿಸಿ.
18. ಸ್ಥಿರ ಬಂಡವಾಳ ಪದ್ದತಿ ಎಂದರೇನು?
19. ಕೀರ್ತಿಮೌಲ್ಯವನ್ನು ನಿರ್ಧರಿಸುವ ಯಾವುದಾದರೂ ಎರಡು ಅಂಶಗಳನ್ನು ತಿಳಿಸಿ.
20. ಪಾಲುಗಾರಿಕೆ ಸಂಸ್ಥೆಯ ವಿರ್ಸಜನೆಯಲ್ಲಿ ಪಾಲುದಾರನು ಆಸ್ತಿಯನ್ನು ತೆಗೆದುಕೊಂಡಾಗ ಬರೆಯುವ ರೋಜು ದಾಖಲೆಯನ್ನು ನೀಡಿ.
21. ಶೇರು ಬಂಡವಾಳದ ಯಾವುದಾದರೂ ಎರಡು ವಿಧಗಳನ್ನು ತಿಳಿಸಿ.
22. ಹಣಕಾಸಿನ ತಃಖ್ತೆಗಳ ಯಾವುದಾದರೂ ಎರಡು ಉದ್ದೇಶಗಳನ್ನು ಬರೆಯಿರಿ.
23. ಹಣಕಾಸು ತಃಖ್ತೆಗಳ ವಿಶ್ಲೇಷಣೆಯ ಯಾವುದಾದರೂ ಎರಡು ಸಾಧನಗಳನ್ನು ಪಟ್ಟಿ ಮಾಡಿ.
24. AS–3 ರ ಪ್ರಕಾರ ವರ್ಗೀಕರಿಸಲಾದ ಯಾವುದಾದರೂ ಎರಡು ಚಟುವಟಿಕೆಗಳನ್ನು ತಿಳಿಸಿ.

## ಭಾಗ – ಸಿ

VI ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಆರು** ಅಂಕಗಳು: 4 × 6 = 24

25. ಸಪ್ನಾ ಮತ್ತು ಆದರ್ಶ್ ಒಂದು ಸಂಸ್ಥೆಯ ಪಾಲುದಾರರಾಗಿದ್ದಾರೆ. 2021–22 ಕ್ಕೆ ಅಂತ್ಯವಾದ ವರ್ಷದಲ್ಲಿ ಸಪ್ನಾಳು ಸ್ವಂತ ವೆಚ್ಚಕ್ಕೆ ಬಳಸಿದ ಹಣ ಈ ಕೆಳಗಿನಂತಿದೆ.

    ದಿನಾಂಕ 01–06–2021 – ₹6,000

    ದಿನಾಂಕ 30–09–2021 – ₹4,000

    ದಿನಾಂಕ 30–11–2021 – ₹3,000

    ದಿನಾಂಕ 01–02–2022 – ₹5,000

    ಗುಣಲಬ್ಧ ಪದ್ಧತಿಯ ಪ್ರಕಾರ ವಾರ್ಷಿಕ ಶೇ.12 ರಂತೆ, ದಿನಾಂಕ 31–03–2022 ಕ್ಕೆ ಅಂತ್ಯವಾಗುವ ವರ್ಷಕ್ಕೆ ಸಪ್ನಾಳ ಸ್ವಂತ ವೆಚ್ಚದ ಮೇಲಿನ ಬಡ್ಡಿಯನ್ನು ಕಂಡು ಹಿಡಿಯಿರಿ.

26. ಅರ್ಜುನ್, ಅನ್ಮೋಲ್ ಮತ್ತು ಆಕಾಶ್ ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟವನ್ನು ಅನುಕ್ರಮವಾಗಿ 2:2:1 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ಅನ್ಮೋಲ್ ಸಂಸ್ಥೆಯಿಂದ ನಿವೃತ್ತನಾಗುತ್ತಾನೆ. ಅರ್ಜುನ್ ಮತ್ತು ಆಕಾಶ್ ಭವಿಷ್ಯದ ಲಾಭವನ್ನು 3:1 ರ ಅನುಪಾತದಲ್ಲಿ ಹಂಚಿಕೊಳ್ಳಲು ಒಪ್ಪಿಕೊಳ್ಳುತ್ತಾರೆ. ಅರ್ಜುನ್ ಮತ್ತು ಆಕಾಶ್ ರವರ ಗಳಿಕೆಯ ಅನುಪಾತವನ್ನು ಕಂಡುಹಿಡಿಯಿರಿ.

27. ನವ್ಯ, ದೀಪಾ ಮತ್ತು ಕಿರಣ್ ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟವನ್ನು ಅನುಕ್ರಮವಾಗಿ 2:2:1 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ದಿನಾಂಕ 01–04–2021 ರಂದು ಅವರ ಬಂಡವಾಳ ಅನುಕ್ರಮವಾಗಿ ₹90,000, ₹90,000 ಮತ್ತು ₹45,000 ಆಗಿರುತ್ತದೆ. ದಿನಾಂಕ 01–10–2021 ರಂದು ದೀಪಾ ನಿಧನ ಹೊಂದಿದ್ದು, ಪಾಲುಗಾರಿಕೆಯ ಒಪ್ಪಂದವು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ.

    a) ದೀಪಾಳ ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇ.6 ರಂತೆ.

    b) ದೀಪಾಳ ಮಾಸಿಕ ಸಂಬಳ ₹2,500.

    c) ಹಿಂದಿನ ವರ್ಷದ ಲಾಭದ ಆಧಾರದ ಮೇಲೆ ಮರಣ ಹೊಂದಿದ ದಿನಾಂಕದವರೆಗಿನ ದೀಪಾಳ ಲಾಭದ ಪಾಲು.

    2020–21 ಕ್ಕೆ ಸಂಸ್ಥೆಯ ಲಾಭ ₹72,000.

DPUE

d) ದೀಪಾಳ ಪಾಲಿನ ಕೀರ್ತಿಮೌಲ್ಯ ₹12,000. (As per AS 26)

ದೀಪಾಳ ಬಂಡವಾಳ ಖಾತೆಯನ್ನು ತಯಾರಿಸಿ, ದೀಪಾಳ ವಾರಸುದಾದರಿಗೆ ಕೊಡಬೇಕಾದ ಮೊತ್ತವನ್ನು ಕಂಡುಹಿಡಿಯಿರಿ.

28. ವಿಘ್ನೇಶ್ ಕಂ. ನಿಯಮಿತ, ಇವರು ₹100 ರ ಮುಖಬೆಲೆಯ 10,000, 8% ಸಾಲಪತ್ರ(ಡಿಬೆಂಚರ್)ಗಳನ್ನು ಮುಖಬೆಲೆಗೆ ಬಿಡುಗಡೆ ಮಾಡಿದೆ. ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿದೆ.

₹20 ಅರ್ಜಿ ಹಣ

₹50 ಹಂಚಿಕೆ ಹಣ

₹30 ಪ್ರಥಮ ಮತ್ತು ಅಂತಿಮ ಕರೆ ಹಣ

ಎಲ್ಲಾ ಸಾಲಪತ್ರಗಳು ವಂತಿಗೆಯಾಗಿದ್ದು, ಹಣವನ್ನು ಸರಿಯಾಗಿ ಸ್ವೀಕರಿಸಲಾಯಿತು.

ಮೇಲಿನ ವಹಿವಾಟುಗಳಿಗೆ ರೋಜು ದಾಖಲೆಗಳನ್ನು ಬರೆಯಿರಿ.

29. ಈ ಕೆಳಗಿನ ವಿವರಗಳಿಂದ ಮಾರ್ಚ್ 31, 2022 ಕ್ಕೆ ಕೊನೆಗೊಂಡಂತೆ, ಪರಿಚ್ಛೇದ III ರಂತೆ, ಕಂಪನಿಯ ಕಾಯಿದೆ 2013 ರ ಪ್ರಕಾರ ಅಢಾವೆ ಪತ್ರಿಕೆಯನ್ನು ತಯಾರಿಸಿ.

| ವಿವರಗಳು | ₹ |
|---|---|
| ಶೇರುದಾರರ ನಿಧಿ | 20,00,000 |
| ಚಾಲ್ತಿಯೇತರ ಹೊಣೆಗಾರಿಕೆಗಳು | 19,60,000 |
| ಗೋಚರ ಆಸ್ತಿಗಳು | 32,00,000 |
| ದಾಸ್ತಾನು | 80,000 |
| ವ್ಯಾಪಾರಿ ಕೊಡತಕ್ಕವುಗಳು | 1,20,000 |
| ವ್ಯಾಪಾರಿ ಬರತಕ್ಕವುಗಳು | 3.20,000 |
| ನಗದು ಮತ್ತು ನಗದು ಸಮನಾಂತರಗಳು | 4.80.000 |

30. ಈ ಕೆಳಗಿನ ವಿವರಗಳ ಸಹಾಯದಿಂದ ಚಾಲ್ತಿ ಅನುಪಾತ ಮತ್ತು ತ್ವರಿತ ಅನುಪಾತಗಳನ್ನು ಕಂಡುಹಿಡಿಯಿರಿ.

| ವಿವರಗಳು | ₹ |
|---|---|
| ದಾಸ್ತಾನು | 1,20,000 |
| ವ್ಯಾಪಾರಿ ಬರತಕ್ಕವುಗಳು | 90,000 |
| ನಗದು ಮತ್ತು ನಗದು ಸಮನಾಂತರಗಳು | 22,800 |
| ವ್ಯಾಪಾರಿ ಕೊಡತಕ್ಕವುಗಳು | 2,34,000 |
| ಚಾಲ್ತಿ ಹೂಡಿಕೆಗಳು | 7,200 |
| ಪ್ರಸ್ತಾವಿತ ಲಾಭಾಂಶ | 6,000 |
| ಬ್ಯಾಂಕಿನ ಮೀರೆಳೆತ | 60,000 |

31. ಈ ಕೆಳಗಿನ ವಿವರಗಳಿಂದ ಹಣಕಾಸು ಚಟುವಟಿಕೆಗಳಿಂದಾಗುವ ನಗದು ಹರಿವುಗಳನ್ನು ಲೆಕ್ಕಾಚಾರ ಮಾಡಿ.

| ವಿವರಗಳು | 01–04–2020(₹) | 31–03–2021(₹) |
|---|---|---|
| ಸಾಲಪತ್ರಗಳು | 8,00,000 | 10,00,000 |
| ಪ್ರಾಶಸ್ತ್ಯದ ಶೇರು ಬಂಡವಾಳ | 3,00,000 | 5,00,000 |

ಆ ವರ್ಷದಲ್ಲಿ ಕಂಪನಿಯು ಒಟ್ಟು ₹1,00,00 ಮೌಲ್ಯದ ಸಾಲಪತ್ರಗಳನ್ನು ವಿಮೋಚನೆ ಮಾಡಿದೆ.

**ಭಾಗ – ಡಿ**

VII ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಹನ್ನೆರಡು** ಅಂಕಗಳು: $3 \times 12 = 36$

32. ಸ್ಟಾರ್ ಸ್ಪೋರ್ಟ್ಸ್ ಕ್ಲಬ್, ಬೆಂಗಳೂರು ಇವರ ಅಢಾವೆ ಪತ್ರಿಕೆ ಮತ್ತು ಸ್ವೀಕೃತಿ ಮತ್ತು ಪಾವತಿ ಖಾತೆಯು ಈ ಕೆಳಗಿನಂತಿದೆ.

DPUE

ದಿನಾಂಕ 31–03–2021 ರ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ₹ | ಆಸ್ತಿಗಳು | ₹ |
|---|---|---|---|
| ಕೊಡಬೇಕಾದ ಸಂಬಳ | 6,000 | ನಗದು | 10,500 |
| ಮುಂಗಡ ಸ್ವೀಕರಿಸಿದ ವಂತಿಗೆಗಳು | 5,000 | ಕ್ರೀಡಾ ಸಾಮಾಗ್ರಿಗಳು | 25,000 |
| ಬಂಡವಾಳ ನಿಧಿ | 1,35,500 | ಪೀಠೋಪಕರಣಗಳು | 21,000 |
| | | ಭೂಮಿ | 90,000 |
| | 1,46,500 | | 1,46,500 |

ದಿನಾಂಕ 31–03–2022 ಕ್ಕೆ ಕೊನೆಗೊಳ್ಳುವಂತೆ ಸ್ವೀಕೃತಿ ಮತ್ತು ಪಾವತಿ ಖಾತೆ

**Dr.** **Cr.**

| ಸ್ವೀಕೃತಿಗಳು | ₹ | ಪಾವತಿಗಳು | ₹ |
|---|---|---|---|
| ರಿಗೆ, | | ರಿಂದ, | |
| ಆರಂಭಿಕ ಶಿಲ್ಕು | 10,500 | ಸಂಬಳ | 23,000 |
| ವಂತಿಗೆಗಳು | 62,000 | ಕ್ರೀಡಾ ಸಾಮಾಗ್ರಿಗಳು | 15,000 |
| ಪ್ರವೇಶ ಶುಲ್ಕಗಳು | 10,000 | ಹೂಡಿಕೆಗಳು | 20,000 |
| ಹಳೆಯ ದಿನಪತ್ರಿಕೆಗಳ ಮಾರಾಟ | 2,000 | ಅಂಚೆ ವೆಚ್ಚ | 1,400 |
| ಕ್ರೀಡಾ ಶುಲ್ಕಗಳು | 7,500 | ವಿದ್ಯುತ್ ಶುಲ್ಕ | 1,600 |
| | | ಆಟದ ಮೈದಾನದ ನಿರ್ವಹಣೆ | 6,500 |
| | | ಅಂತಿಮ ಶಿಲ್ಕು | 18,500 |
| | 92,000 | | 92,000 |

ಹೊಂದಾಣಿಕೆಗಳು:

a) 2021–22 ಕ್ಕೆ ಬರಬೇಕಾದ ಬಾಕಿ ವಂತಿಗೆ ₹2,500.

b) ದಿನಾಂಕ 31–03–2022 ಕ್ಕೆ ಕೊಡಬೇಕಾದ ಬಾಕಿ ಸಂಬಳ ₹8,000.

c) ಪ್ರವೇಶ ಶುಲ್ಕದ ಅರ್ಧದಷ್ಟನ್ನು (50%) ಬಂಡವಾಳೀಕರಿಸಿ.

d) ಕ್ರೀಡಾ ಸಾಮಾಗ್ರಿಗಳ ಮೇಲೆ ₹ 8,500 ರಷ್ಟು ಸವಕಳಿ ತೆಗೆಯಿರಿ.

**ತಯಾರಿಸಿ:** i) ದಿನಾಂಕ 31–03–2022 ಕ್ಕೆ ಅಂತ್ಯವಾಗುವ ಸಾಲಿನ ಆದಾಯ ಮತ್ತು ವೆಚ್ಚ ಖಾತೆ

ii) ದಿನಾಂಕ 31–03–2022 ರ ಅಢಾವೆ ಪತ್ರಿಕೆ

33. ಅಶ್ವಿನಿ ಮತ್ತು ಅನಿತಾ ಒಂದು ಸಂಸ್ಥೆಯ ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟವನ್ನು 3:2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ದಿನಾಂಕ 31–03–2021 ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ದಿನಾಂಕ 31–03–2021 ರ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ₹ | ಆಸ್ತಿಗಳು | ₹ |
|---|---|---|---|
| ಸಾಹುಕಾರರು | 30.000 | ಬ್ಯಾಂಕಿನಲ್ಲಿ ನಗದು | 32,500 |
| ಕೊಡತಕ್ಕ ಹುಂಡಿಗಳು | 10,500 | ಬರತಕ್ಕ ಹುಂಡಿಗಳು | 8,000 |
| ಸಾಮಾನ್ಯ ಮೀಸಲು | 30,000 | ಸಾಲಗಾರರು | 40,000 |
| ಬಂಡವಾಳ ಖಾತೆ: | | ದಾಸ್ತಾನು | 25,000 |
| ಅಶ್ವಿನಿ | 1,00,000 | ಪೀಠೋಪಕರಣ | 20,000 |
| ಅನಿತಾ | 70,000 | ಕಟ್ಟಡ | 1,15,000 |
| | 2,40,500 | | 2,40,500 |

ದಿನಾಂಕ 01–04–2021 ರಂದು ಅನ್ವಿತಾ ಗೆ ಈ ಕೆಳಗಿನ ಕರಾರುಗಳ ಮೇಲೆ ಪಾಲುದಾರಿಕೆಗೆ ಪ್ರವೇಶ ನೀಡಲಾಯಿತು.

a) 1/6 ರ ಭಾಗದ ಲಾಭಕ್ಕಾಗಿ ಅನ್ವಿತಾಳು ಬಂಡವಾಳ ₹50,000 ಮತ್ತು ಕೀರ್ತಿಮೌಲ್ಯಕ್ಕೆ ₹30,000 ನಗದು ತರಬೇಕು.

b) ಕೀರ್ತಿಮೌಲ್ಯದ ಅರ್ಧದಷ್ಟು ಮೊತ್ತವನ್ನು ಹಳೆಯ ಪಾಲುದಾರರು ಹಿಂದಕ್ಕೆ ಪಡೆಯುತ್ತಾರೆ. (As per AS26)

c) ಪೀಠೋಪಕರಣಗಳ ಮೇಲೆ ಶೇ. 10ರಷ್ಟು ಸವಕಳಿ ತೆಗೆಯಿರಿ ಹಾಗೂ ಕಟ್ಟಡದ ಬೆಲೆಯನ್ನು ₹23,000 ದಷ್ಟು ಹೆಚ್ಚಿಸಿ.

d) ಸಾಲಗಾರರ ಮೇಲೆ ಸಂಶಯಾತ್ಮಕ ಸಾಲಗಳಿಗಾಗಿ ಶೇ 5 ರಷ್ಟು ಕಾಯ್ದಿರಿಸಿ.

e) ಕೊಡತಕ್ಕ ದುರಸ್ತಿ ವೆಚ್ಚಕ್ಕಾಗಿ ₹2000 ಒದಗಿಸಿ.

**ತಯಾರಿಸಿ:** i) ಪುನರ್‌ಮೌಲ್ಯ ಖಾತೆ

ii) ಪಾಲುಗಾರರ ಬಂಡವಾಳ ಖಾತೆ

iii) ಸಂಸ್ಥೆಯ ಹೊಸ ಅಢಾವೆ ಪತ್ರಿಕೆ

34. ಸುಮಾ ಮತ್ತು ರೀಮಾ ಪಾಲುದಾರರಾಗಿದ್ದು, ಲಾಭ–ನಷ್ಟವನ್ನು ಅನುಕ್ರಮವಾಗಿ 2:1 ರ ಅನುಪಾತದಲ್ಲಿ ಹಂಚಿಕೊಳ್ಳುವರು. ದಿನಾಂಕ 31–03–2022 ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ದಿನಾಂಕ 31–03–2022 ರ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ₹ | ಆಸ್ತಿಗಳು | | ₹ |
|---|---|---|---|---|
| ಸಾಹುಕಾರರು | 12,000 | ಬ್ಯಾಂಕಿನಲ್ಲಿ ನಗದು | | 10,000 |
| ಕೊಡತಕ್ಕ ಹುಂಡಿಗಳು | 20,000 | ಬರತಕ್ಕ ಹುಂಡಿಗಳು | | 10,000 |
| ಸುಮಾಳ ಸಾಲ | 7,000 | ಸಾಲಗಾರರು | 45,000 | |
| ಮೀಸಲು ನಿಧಿ | 36,000 | (–)PDD | 5,000 | 40,000 |
| ಬಂಡವಾಳ ಖಾತೆ: | | ಹೂಡಿಕೆಗಳು | | 15,000 |
| ಸುಮಾ | 1,00,000 | ಪೀಠೋಪಕರಣ | | 20,000 |
| ರೀಮಾ | 50,000 | ಯಂತ್ರೋಪಕರಣ | | 25,000 |
| | | ವಾಹನ | | 90,000 |
| | | ಲಾಭ–ನಷ್ಟ ಖಾತೆ | | 15,000 |
| | 2,25,000 | | | 2,25,000 |

ಮೇಲಿನ ದಿನಾಂಕದಂದು ಪಾಲುಗಾರಿಕೆ ಸಂಸ್ಥೆಯನ್ನು ವಿಸರ್ಜಿಸಲಾಯಿತು.

a) ಆಸ್ತಿಗಳನ್ನು ಈ ಕೆಳಗಿನಂತೆ ವಿಲೇವಾರಿ ಮಾಡಲಾಯಿತು: ಬರತಕ್ಕ ಹುಂಡಿಗಳು–₹ 8,500. ಸಾಲಗಾರರು–₹ 42,000, ಹೂಡಿಕೆಗಳು–₹ 18,000, ಯಂತ್ರೋಪಕರಣ–₹ 20,000 ಮತ್ತು ಪೀಠೋಪಕರಣವನ್ನು ₹ 18,000ಕ್ಕೆ ವಿಲೇವಾರಿ ಮಾಡಲಾಯಿತು.

b) ಸುಮಾಳು ವಾಹನವನ್ನು ₹ 82,000ಕ್ಕೆ ತೆಗೆದುಕೊಂಡಿದ್ದಾಳೆ.

c) ವಿಸರ್ಜನಾ ವೆಚ್ಚ ₹ 3000.

d) ಎಲ್ಲಾ ಹೊಣೆಗಾರಿಕೆಗಳನ್ನು ಪೂರ್ಣವಾಗಿ ಪಾವತಿಸಲಾಗಿದೆ.

**ತಯಾರಿಸಿ:** i) ವಿಲೇವಾರಿ ಖಾತೆ

ii) ಪಾಲುದಾರರ ಬಂಡವಾಳ ಖಾತೆ

iii) ಬ್ಯಾಂಕ್ ಖಾತೆ

35. ಕಾಗ್ನಿಕ್ವೆಸ್ಟ್ ನಿಯಮಿತ ಇವರು ₹ 100 ಮುಖಬೆಲೆಯ 10,000 ಸಾಮಾನ್ಯ ಶೇರುಗಳನ್ನು ಪ್ರತಿ ಶೇರಿಗೆ ₹ 10 ರಂತೆ ಪ್ರೀಮಿಯಂಗೆ ಬಿಡುಗಡೆ ಮಾಡಿದ್ದಾರೆ. ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿದೆ.

₹ 20 ಅರ್ಜಿ ಹಣ

₹ 50 ಹಂಚಿಕೆ ಹಣ (ಪ್ರೀಮಿಯಂ ಸೇರಿ)

₹ 40 ಪ್ರಥಮ ಮತ್ತು ಅಂತಿಮ ಕರೆ ಹಣ

ಎಲ್ಲಾ ಶೇರುಗಳು ವಂತಿಗೆಯಾಗಿದ್ದು, ಹಣ ಸ್ವೀಕರಿಸಲಾಗಿದೆ. ಆದರೆ 1000 ಶೇರುಗಳ ಮೇಲಿನ ಪ್ರಥಮ ಮತ್ತು ಅಂತಿಮ ಕರೆಯ ಹಣ ಸಂದಾಯವಾಗಿರುವುದಿಲ್ಲ. ನಿರ್ದೇಶಕರು ಅವುಗಳನ್ನು ಮುಟ್ಟುಗೋಲು ಹಾಕಿಕೊಂಡು, ಪ್ರತೀ ಶೇರಿಗೆ ₹ 85 ರಂತೆ ಪೂರ್ಣ ಪಾವತಿಯಾದ ಶೇರುಗಳೆಂದು ಮರು ಬಿಡುಗಡೆ ಮಾಡಿರುತ್ತಾರೆ.

ಕಂಪನಿಯ ಪುಸ್ತಕದಲ್ಲಿ ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ.

36. ಈ ಕೆಳಗಿನ ಸಂದರ್ಭಗಳಿಗೆ ಸಂಬಂಧಿಸಿದ ರೋಜು ದಾಖಲೆಗಳನ್ನು ಬರೆಯಿರಿ.

a) ತಲಾ ₹100 ಮುಖಬೆಲೆಯ ಶೇಕಡ 9 ರ 10,000 ಸಾಲಪತ್ರಗಳನ್ನು ಶೇಕಡ 10ರ ಪ್ರೀಮಿಯಂ ಬೆಲೆಯಲ್ಲಿ ನೀಡಿಕೆ ಮಾಡಿ, ಮುಖಬೆಲೆಯಲ್ಲಿ ವಿಮೋಚನೆಗೊಳಿಸುವುದು.

c) ತಲಾ ₹100 ಮುಖಬೆಲೆಯ ಶೇಕಡ 9 ರ 10,000 ಸಾಲಪತ್ರಗಳನ್ನು ಶೇಕಡ 10ರ ಸೋಡಿ ಬೆಲೆಯಲ್ಲಿ ನೀಡಿಕೆ ಮಾಡಿ, ಶೇಕಡ 10 ಪ್ರೀಮಿಯಂ ಬೆಲೆಯಲ್ಲಿ ವಿಮೋಚನೆಗೊಳಿಸುವುದು.

c) ತಲಾ ₹100 ಮುಖಬೆಲೆಯ ಶೇಕಡ 9ರ 10,000 ಸಾಲಪತ್ರಗಳನ್ನು ಶೇಕಡ 10ರ ಪ್ರೀಮಿಯಂನಲ್ಲಿ ನೀಡಿಕೆ ಮಾಡಿ, ಶೇಕಡ 10ರ ಪ್ರೀಮಿಯಂನಲ್ಲಿ ವಿಮೋಚನೆಗೊಳಿಸುವುದು.

d) ತಲಾ ₹100 ಮುಖಬೆಲೆಯ ಶೇಕಡ 9ರ 10,000 ಸಾಲಪತ್ರಗಳನ್ನು ಶೇಕಡ 10ರ ಸೋಡಿ ಬೆಲೆಯಲ್ಲಿ ನೀಡಿಕೆ ಮಾಡಿ, ಮುಖಬೆಲೆಯಲ್ಲಿ ವಿಮೋಚನೆಗೊಳಿಸುವುದು.

37. ವೀನಸ್ ಕಂ. ನಿಯಮಿತ ಅವರ 31 ನೇ ಮಾರ್ಚ್ 2021 ಮತ್ತು ಸ2022 ರ ಆಢಾವೆ ಪತ್ರಿಕೆಗಳಿಂದ ಸಾಮಾನ್ಯ ಗಾತ್ರದ ಆಢಾವೆ ಪತ್ರಿಕೆಯನ್ನು ತಯಾರಿಸಿ.

ದಿನಾಂಕ 32–03–2021 ಮತ್ತು 31–03–2022 ರ ಆಢಾವೆ ಪತ್ರಿಕೆ

| ವಿವರಗಳು | 31–03–2021<br>₹ | 31–03–2022<br>₹ |
|---|---|---|
| 1.ಈಕ್ವಿಟಿ ಮತ್ತು ಹೊಣೆಗಾರಿಕೆಗಳು | | |
| ಶೇರುದಾರರ ನಿಧಿಗಳು: | | |
| ಶೇರು ಬಂಡವಾಳ | 24,00,000 | 30,00,000 |
| ಮೀಸಲು ಮತ್ತು ಉಳಿಕೆ ಲಾಭ | 10,00,000 | 15,00,000 |
| 2. ಚಾಲ್ತಿಯೇತರ ಹೊಣೆಗಾರಿಕೆಗಳು: | | |
| ದೀರ್ಘಾವಧಿಯ ಸಾಲಗಳು | 10,00,000 | 12,00,000 |
| 3. ಚಾಲ್ತಿ ಹೊಣೆಗಾರಿಕೆಗಳು: | | |
| ವ್ಯಾಪಾರಿ ಕೊಡತಕ್ಕವುಗಳು | 21,00,000 | 26,00,000 |
| ಒಟ್ಟು | 65,00,000 | 83,00,000 |
| ಆಸ್ತಿಗಳು: | | |
| 1.ಚಾಲ್ತಿಯೇತರ ಅಸ್ತಿಗಳು: | | |
| ಗೋಚರ ಆಸ್ತಿಗಳು | 26,00,000 | 28,00,000 |
| ಅಗೋಚರ ಆಸ್ತಿಗಳು | 12,00,000 | 20,00,000 |
| 2. ಚಾಲ್ತಿ ಆಸ್ತಿಗಳು: | | |
| ದಾಸ್ತಾನು | 7,00,000 | 13,00,000 |
| ಇತರೆ ಚಾಲ್ತಿ ಆಸ್ತಿಗಳು | 20,00,000 | 22,00,000 |
| ಒಟ್ಟು | 65,00,000 | 83,00,000 |

38. ಈ ಕೆಳಗಿನ ಮಾಹಿತಿಗಳಿಂದ ಈ ಅನುಪಾತಗಳನ್ನು ಕಂಡು ಹಿಡಿಯಿರಿ.

a) ದಾಸ್ತಾನು ಆವರ್ತನ ಅನುಪಾತ

b) ವ್ಯಾಪಾರಿ ಬರತಕ್ಕವುಗಳ ಆವರ್ತನ ಅನುಪಾತ

c) ವ್ಯಾಪಾರಿ ಕೊಡತಕ್ಕವುಗಳ ಆವರ್ತನ ಅನುಪಾತ

d) ಸ್ಥೂಲ ಲಾಭ ಅನುಪಾತ

e) ನಿವ್ವಳ ಲಾಭ ಅನುಪಾತ

f) ಕಾರ್ಯಾತ್ಮಕ  ಅನುಪಾತ

DPUE

| ವಿವರಗಳು | ₹ |
|---|---|
| ಕಾರ್ಯಾಚರಣೆಗಳಿಂದ ಬಂದ ಆದಾಯ | 12,00,000 |
| ಸ್ಥೂಲ ಲಾಭ | 2,40,000 |
| ಸರಾಸರಿ ದಾಸ್ತಾನು | 1,20,000 |
| ನಿವ್ವಳ ಉದ್ದರಿ ಕಾರ್ಯಾಚರಣೆಗಳಿಂದ ಬರುವ ಆದಾಯ | 7,20,000 |
| ನಿವ್ವಳ ಉದ್ದರಿ ಖರೀದಿ | 6,00,000 |
| ಸರಾಸರಿ ವ್ಯಾಪಾರಿ ಕೊಡತಕ್ಕವು | 3,00,000 |
| ಸರಾಸರಿ ವ್ಯಾಪಾರಿ ಬರತಕ್ಕವುಗಳು | 1,80,000 |
| ಕಾರ್ಯಾಚರಣೆ ವೆಚ್ಚ | 1,20,000 |
| ನಿವ್ವಳ ಲಾಭ | 1,20,000 |

**ಭಾಗ – ಇ (ಪ್ರಾಯೋಗಿಕ ಪ್ರಶ್ನೆಗಳು)**

VIII ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಐದು** ಅಂಕಗಳು: $2 \times 5 = 10$

39. ಪಾಲುಗಾರಿಕೆ ಒಪ್ಪಂದದ ಅನುಪಸ್ಥಿತಿಯಲ್ಲಿ ಈ ಕೆಳಗಿನವುಗಳನ್ನು ಯಾವ ರೀತಿ ಪರಿಗಣಿಸುವಿರಿ?
    a) ಲಾಭ ಮತ್ತು ನಷ್ಟದ ಹಂಚಿಕೆಯ ಅನುಪಾತ
    b) ಬಂಡವಾಳದ ಮೇಲಿನ ಬಡ್ಡಿ
    c) ಸ್ವಂತ ವೆಚ್ಚದ ಮೇಲಿನ ಬಡ್ಡಿ
    d) ಪಾಲುದಾರರ ಮುಂಗಡ ಸಾಲದ ಮೇಲಿನ ಬಡ್ಡಿ
    e) ಸಂಸ್ಥೆಯ ಕೆಲಸದಲ್ಲಿ ತೊಡಗಿಸಿಕೊಂಡ ಪಾಲುದಾರನಿಗೆ ಸಂಭಾವನೆ

40. ಮುಖ್ಯ ತಲೆಬರಹಗಳೊಂದಿಗೆ ಕಂಪನಿಯ ಮಾದರಿ ಅಢಾವೆ ಪತ್ರಿಕೆಯನ್ನು ಬರೆಯಿರಿ (ಯಾವುದಾದರೂ ಐದು ಅಂಶಗಳು)

41. ಐದು ಕಾಲ್ಪನಿಕ ಅಂಶಗಳೊಂದಿಗೆ ತುಲನಾತ್ಮಕ ಲಾಭ ಮತ್ತು ನಷ್ಟದ ತಂಖ್ತೆಯನ್ನು ತಯಾರಿಸಿ.

---

DPUE